# ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

E-mail:Commissioner.pue@gmail.com. * Ph. No.23361857, 23361858* Fax-23361852


ಸಂಖ್ಯೆ:ಪಿಯು/ಶೈ.ಶಾ/ಪ್ರ.ಪಿಯುಸಿ.ದಾ/2017-18 ದಿನಾಂಕ: 16-09-2017

## ಸುತ್ತೋಲೆ

ವಿಷಯ:- 2017-18 ನೇ ಸಾಲಿನ ಪ್ರಥಮ ಪಿಯುಸಿ ದಾಖಲಾತಿ ಮಾಹಿತಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವ ದಿನಾಂಕ ವಿಸ್ತರಿಸುವ ಬಗ್ಗೆ

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2017-18 ನೇ ಸಾಲಿಗೆ ಪದವಿ ಪೂರ್ವ ಶಿಕ್ಷಣದಲ್ಲಿ ಪ್ರಥಮ ಪಿಯುಸಿ ತರಗತಿಗಳಿಗೆ ದಾಖಲಾದ ವಿದ್ಯಾರ್ಥಿಗಳ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ತಿಳಿಸಲಾಗಿದೆ.

ಪದವಿ ಪೂರ್ವ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ (www.pue.kar.nic.in) ಅಳವಡಿಸಲಾದ ಆನ್‌ಲೈನ್ ಪೋರ್ಟಲ್‌ನಲ್ಲಿ ನೂತನವಾಗಿ ಮಾನ್ಯತೆ ಪಡೆದ ಕಾಲೇಜಿನವರು ನೋಂದಾಯಿಸಿಕೊಂಡು ಲಾಗ್‌ಇನ್ ಅಗುವುದು ಹಾಗೂ ಈಗಾಗಲೇ ನೋದಾಯಿಸಿಕೊಂಡ ಕಾಲೇಜಿನವರು ನೇರವಾಗಿ ಲಾಗ್‌ಇನ್ ಆಗಿ ತಮ್ಮ ಎಲ್ಲಾ ವಿದ್ಯಾರ್ಥಿಗಳ ಸಂಪೂರ್ಣ ನಿಖರ ಮಾಹಿತಿಗಳನ್ನು ಭರ್ತಿಮಾಡಿ **ದಿನಾಂಕ 20-09-2017** ರವರೆಗೆ ವಿಸ್ತರಿಸಿ ಆದೇಶಿಸಲಾಗಿದೆ.

ವಿದ್ಯಾರ್ಥಿಯ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಭರ್ತಿಮಾಡಿ ಸಲ್ಲಿಸುವ ಮುಂಚೆ ಪ್ರಾಚಾರ್ಯರು ನಿಖರ ದಾಖಲೆಗಳೊಂದಿಗೆ ಪರಿಶೀಲಿಸುವುದು ಕಡ್ಡಾಯವಾಗಿದೆ.

ಒಂದು ವೇಳೆ ವಿದ್ಯಾರ್ಥಿಗಳ ಮಾಹಿತಿ ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯಲ್ಲಿ ತಪ್ಪಾಗಿದ್ದರೆ ಪ್ರಾಚಾರ್ಯರು ನೇರವಾಗಿ ಸರಿಪಡಿಸಿ ಸಲ್ಲಿಸುವಂತಿಲ್ಲ ಆನ್‌ಲೈನ್ ನಲ್ಲಿ ಸಲ್ಲಿಸುವುದುಕ್ಕಿಂತ ಮುನ್ನ ಎಸ್.ಎಸ್.ಎಲ್.ಸಿ ಬೋರ್ಡ್ ನಿಂದ ಸರಿಪಡಿಸಿಕೊಂಡು ವಿದ್ಯಾರ್ಥಿಯು ದೃಢೀಕೃತ ಪ್ರತಿಯನ್ನು ಸಲ್ಲಿಸಿದ್ದಲ್ಲಿ ಮಾತ್ರ ತಪ್ಪು ಸರಿಪಡಿಸಬಹುದಾಗಿದೆ.ಆದಗ್ಯೂ ಮಾಹಿತಿ ಸಲ್ಲಿಕೆ ತಪ್ಪಾದಲ್ಲಿ ನೇರವಾಗಿ ಪ್ರಾಚಾರ್ಯರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

**ದಿನಾಂಕ: 20-09-2017 ರ ನಂತರ ಸಲ್ಲಿಸಿದ ಮಾಹಿತಿಗಳನ್ನು ಯಾವುದೇ ಕಾರಣಕ್ಕೂ ಮಾನ್ಯ ಮಾಡುವುದಿಲ್ಲ. -ಸಂಪರ್ಕಿಸುವ ದೂ.ಸಂಖ್ಯೆ:-.080-23083869**

ನಿರ್ದೇಶಕರು (ಶೈ)
ಪದವಿ ಪೂರ್ವ ಶಿಕ್ಷಣ ಇಲಾಖೆ 16/9/17

ಗೆ,

1. ಎಲ್ಲಾ ಜಿಲ್ಲಾ ಉಪ ನಿರ್ದೇಶಕರ ಮುಖಾಂತರ ಕಾಲೇಜಿನ ಪ್ರಾಂಶುಪಾಲರಿಗೆ- **ಈ ಬಗ್ಗೆ ಕಾಲೇಜಿನ ಪ್ರಾಂಶುಪಾಲರುಗಳಿಗೆ ಆನ್‌ಲೈನ್‌ನಲ್ಲಿ ಕಡ್ಡಯವಾಗಿ ಸದರಿ ದಿನಾಂಕದೊಳಗೆ ವಿದ್ಯಾರ್ಥಿಗಳ ಎಲ್ಲಾ ಮಾಹಿತಿಗಳನ್ನು ನೊಂದಾಯಿಸಿಕೊಳ್ಳವುದಕ್ಕೆ ಸೂಚಿಸುವುದು**
2. ಇ-ಆಡಳಿತ ಶಾಖೆ-ಅಂತರ್‌ಜಾಲದಲ್ಲಿ ಅಳವಡಿಸಲು

**ಪ್ರತಿಯನ್ನು ಮಾಹಿತಿಗಾಗಿ**

1. ಜಂಟಿ ನಿರ್ದೇಶಕರು ಶೈಕ್ಷಣಿಕ/ಪರೀಕ್ಷೆ/ಮಾ&ಅ. ಪ.ಪೂ.ಶಿ.ಇಲಾಖೆ.
2. ನಿರ್ದೇಶಕರು ಆಪ್ತಶಾಖೆ. ಪ.ಪೂ.ಶಿ.ಇಲಾಖೆ.
3. ಕಛೇರಿ ಪ್ರತಿ